ದಿನಾಂಕ 04.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ 1 ಮತ್ತು 2ನೆ ಪ್ರತಿವಾದಿ ಪರ ವಕೀಲರಿಂದ</u>

1ನೆ ಪ್ರತಿವಾದಿಯ ತಂದೆ ಹೆಸರು ಶಿವಪ್ಪ ತಂದೆ ಮಲ್ಲಪ್ಪ ಎಂದರೆ ಸರಿ. 1ನೆ ಪ್ರತಿವಾದಿಯ ತಂದೆ ಹೆಸರು ಶಿವಪ್ಪರವರಿಗೆ 05 ಜನ ಗಂಡ ಮಕ್ಕಳು ಮತ್ತು 04 ಜನ ಹೆಣ್ಣು ಮಕ್ಕಳು ಎಂದರೆ ಸರಿ. ನಾಗಮ್ಮ, ಬಸಮ್ಮ, ಶಾಂತಮ್ಮ, ಮಹಾದೇವಿ ಹೆಣ್ಣು ಮಕ್ಕಳು ಎಂದರೆ ಸರಿ. ಬಾಳಪ್ಪ, ನಾಗಪ್ಪ, ಮಲ್ಲಪ್ಪ, ಶರಣಪ್ಪ, ಬಸಪ್ಪ ಗಂಡಮಕ್ಕಳು ಎಂದರೆ ಸರಿ. 3ನೆ ಪ್ರತಿವಾದಿ 1ನೆ ಪ್ರತಿವಾದಿಯ ಹೆಂಡತಿ ಎಂದರೆ ಸಾಕ್ಷಿ 2ನೆ ಹೆಂಡತಿ ಎಂದು ಹೇಳುತ್ತಾರೆ. 1 ಮತ್ತು 3ನೆ ಪ್ರತಿವಾದಿಯರ ಮದುವೆಯಾಗಿ 26-ವರ್ಷಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಮದುವೆ 1ನೆ ಪ್ರತಿವಾದಿಯೊಂದಿಗೆ 24-ವರ್ಷಗಳ ಹಿಂದೆ ಆಗಿರುತ್ತದೆ ಎಂದು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೀರಾ ಎಂದರೆ ಬರೆಸಿದ್ದೇನೆ ಎಂದು ಹೇಳುತ್ತಾರೆ. 1 ಮತ್ತು 3ನೆ ಪ್ರತಿವಾದಿಯರ ಮದುವೆಯಾಗಿ ಎಷ್ಟು ವರ್ಷಗಳಾಗಿರುತ್ತದೆ ಎಂದರೆ ಸಾಕ್ಷಿ 16-ವರ್ಷಗಳು ಆಗಿರುತ್ತವೆ ಎಂದು ಹೇಳುತ್ತಾರೆ. ಈ ಕುರಿತು ನನ್ನ ವಾದಿ ಪತ್ರದಲ್ಲಿ ಬರೆಸಿಲ್ಲ.

1ನೆ ಪ್ರತಿವಾದಿ ಮತ್ತು ಅವರ ಅಣ್ಣತಮ್ಮಂದಿರ ವಿರುದ್ದ ಶಿವಪ್ಪರವರ ಹೆಣ್ಣಮಕ್ಕಳು ಇದೆ ನ್ಯಾಯಾಲಯದಲ್ಲಿ ಪಾಲು ಕೋರಿ ಅಸಲು ದಾವೆ ನಂ.193/2011 ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಪಾಲು ಕೊಡಬೇಕೆಂದು ತೀರ್ಪು ಆಗಿರುತ್ತದೆ ಎಂದರೆ ಸರಿ. ಸದರಿ ತಿರ್ಪನ್ನು ಪ್ರಶ್ನಿಸಿ 1ನೆ ಪ್ರತಿವಾದಿ ಮತ್ತು ಅವರ ಅಣ್ಣತಮ್ಮಂದಿರು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವಾಸ್ತಿಗಳ ಮೇಲೆ 1ನೆ ಪ್ರತಿವಾದಿ ಮತ್ತು ಅವರ ಅಣ್ಣತಮ್ಮಂದಿರ ವಿರುದ್ದ ಶಿವಪ್ಪರವರ ಹೆಣ್ಣಮಕ್ಕಳು ಇದೆ ನ್ಯಾಯಾಲಯದಲ್ಲಿ ಪಾಲು ಕೋರಿ ಅಸಲು ದಾವೆ ನಂ.193/2011 ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಶಿವಪ್ಪರವರಿಗೆ ಸರ್ವೆ ನಂ.319 ಮತ್ತು 101 ಗಳನ್ನು ಹೊರತುಪಡಿಸಿ ಬೇರೆ ಯಾವುದಾದರೂ ಸ್ವತ್ತುಗಳಿವೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಶಿವಪ್ಪರವರ ಮಕ್ಕಳು FDP No.3/2020 ಯಲ್ಲಿನ ಡಿಕ್ರಿ ಪ್ರಕಾರ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 1ನೆ ಪ್ರತಿವಾದಿ ಒಕ್ಕಲುತನ ಮಾಡುತ್ತಾರೆ. 1ನೆ ಪ್ರತಿವಾದಿಗೆ ದಾವಾಸ್ತಿಗಳ

ಆದಾಯವನ್ನು ಹೊರತುಪಡಿಸಿ ಬೇರೆ ಯಾವುದೆ ಆದಾಯಗಳಿಲ್ಲ ಎಂದರೆ ಸರಿ. 1ನೆ ಪ್ರತಿವಾದಿಯು ವಾದಿಯರ ಹಾಗೂ ಉಳಿದ 2 ಮತ್ತು 3ನೆ ಪ್ರತಿವಾದಿಯರ ಖರ್ಚು ವೆಚ್ಚಗಳನ್ನು ನೋಡುತ್ತಿದ್ದರು ಎಂದರೆ ಸರಿಯಲ್ಲ. 1ನೆ ಪ್ರತಿವಾದಿಯಿಂದ ನಾನು ದೂರವಾಗಿ ತಿಕೋಟಾ ಗ್ರಾಮದಲ್ಲಿ 21-ವರ್ಷಗಳಿಂದ ಇರುತ್ತೇನೆ. 3ನೆ ಪ್ರತಿವಾದಿಯೆ 1ನೆ ಪ್ರತಿವಾದಿಯ ಮೊದಲನೆ ಹೆಂಡತಿ ಎಂದರೆ ಸರಿಯಲ್ಲ.

1ನೆ ಪ್ರತಿವಾದಿಯು 2 ಮತ್ತು 3ನೆ ಪ್ರತಿವಾದಿಯರ ಮತ್ತು ಶಿವಪ್ಪರವರ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1 ಮತ್ತು 3ನೆ ಪ್ರತಿವಾದಿಗೆ 02 ಜನ ಮಕ್ಕಳಿರುತ್ತಾರೆ. 1ನೆ ಪ್ರತಿವಾದಿಯು ಪ್ರಜ್ವಲ ಮತ್ತು ಮತ್ತೊಬ್ಬ ಮಗಳ ಖರ್ಚುವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1ನೆ ಪ್ರತಿವಾದಿಗೆ ಸಾಲವಾದ ಕಾರಣ 4ನೆ ಪ್ರತಿವಾದಿಗೆ ಕುಟುಂಬದ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ ಆದರೆ ಯಾವ ಕಾರಣಕ್ಕಾಗಿ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. 1ನೆ ಪ್ರತಿವಾದಿಗೆ ಸಾಂಸಾರಿಕ ಅಡಚಣಗೋಸ್ಕರ ಕುಟುಂಬದ ಆಸ್ತಿಗಳನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿದ್ದರೂ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4-ಎಕರೆ ಜಮೀನಿನಿಂದ ಬಂದ ಆದಾಯದಿಂದ 1ನೆ ಪ್ರತಿವಾದಿಗೆ ತನ್ನ ಕುಟುಂಬವನ್ನು ನಡೆಸಲು ಸಾಧ್ಯವಾಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 4-ಎಕರೆ ಜಮೀನಿನಿಂದ ಬಂದ ಆದಾಯದಲ್ಲಿ ಎಲ್ಲಾ ಖರ್ಚು ವೆಚ್ಚಗಳು ಆಗಿ 1ನೆ ಪ್ರತಿವಾದಿಗೆ ವರ್ಷಕ್ಕೆ 20 ಸಾವಿರ ಆದಾಯ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ